**ಪಿ.ಡಬ್ಲ್ಯೂ.01**

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 26.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಿ ಕೆ ವಕೀಲರಿಂದ :</u>**

ಈ ಪ್ರಕರಣದ ದಾಖಲಾದ ನಂತರ ಆರೋಪಿಯು ನನಗೆ ನೋಟಿಸು ನೀಡಿರುವುದರಿಂದ, ಅವುಗಳಿಗೆ ನಾನು ಉತ್ತರ ನೀಡಿರುವುದರಿಂದ, ಅವುಗಳನ್ನು ನ್ಯಾಯಾಲಯದ ಗಮನಕ್ಕೆ ತರುವ ಸಲುವಾಗಿ ಹಾಜರು ಪಡಿಸಿರುವೆನು. ನಾನು ನೀಡಿರುವ ಪ್ರತ್ಯುತ್ತರದ ನೋಟಿಸಿನಲ್ಲಿ ನಾನು ರನ್ನ ಸಹಕಾರಿ ಸಂಘದ ಅಧ್ಯಕ್ಷನಾಗಿರುವೆನು ಎಂದು ಹೇಳಿ ಬರೆಸಿರುವೆನು. ನನ್ನ ಉತ್ತರದಲ್ಲಿ ಆರೋಪಿಯು ಫಿಗ್ಮಿ ಸಾಲದಾರರ ಸಾಲಕ್ಕೆ ಜಾಮೀನುದಾರ ಆದ ಬಗ್ಗೆ ಹೇಳಿ ಬರೆಸಿರುವೆನು ಅಥವಾ ಇಲ್ಲ ಎಂದು ಈಗ ನನಗೆ ನೆನಪಿರುವುದಿಲ್ಲ, ಏಕೆಂದರೆ ಈಗ ಅದು ಬಹಳ ದಿವಸಗಳಾಗಿರುವುದರಿಂದ. ಮಾನವ ವಿಜಯಕುಮಾರ ಪಲ್ಲು, ವಿಜಯಕುಮಾರ ಮೋಹನಲಾಲ ಪಲ್ಲು ಇವರು ರನ್ನ ಸಹಕಾರಿ ಬ್ಯಾಂಕಿನಲ್ಲಿ ಫಿಗ್ಮಿ ಸಾಲ ಪಡೆದುಕೊಂಡಿರುವರು. ಈ ಇಬ್ಬರು ವ್ಯಕ್ತಿಗಳಿಗೆ ಸಾಲ ನೀಡಿದ್ದು ಈಗ ಅವರು ಓಡಿ ಹೋಗಿರುವುದರಿಂದ ಆ ಕಾರಣಕ್ಕೆ ಈ ಆರೋಪಿಯ ವಿರುದ್ದ ಈ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ಆರೋಪಿ ಈ ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳ ಫಿಗ್ಮಿ ಸಾಲದ ಭದ್ರತೆಗಾಗಿ ಜಾಮೀನುದಾರ ನಾತೆಯಿಂದ ನೀಡಿರುವಂತಹ ಚೆಕ್ ಆಗಿರುವುದು ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.11.26 16:17:30 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ